ಕರ್ನಾಟಕ ವಿಧಾನ ಸಭೆ

ಸೋಮವಾರ 13ನೇ ಜುಲೈ 1992

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10.50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.

ಅಭಿನಂದನಾ ನಿರ್ಣಯ

ಭಾರತೀಯ ಬಾಹ್ಯಾಕಾಶ ಸಂಸ್ಥೆಯ ವಿಜ್ಞಾನಿಗಳು
ಇನ್‌ಸಾಟ್–2ಎ ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿದ್ದರ ಬಗ್ಗೆ

ಅಧ್ಯಕ್ಷರು : ಮಾನವತೆಗೆ ಮತ್ತು ಶಾಂತಿ ಕಾರ್ಯಗಳಿಗೆ ಬಾಹ್ಯಾಕಾಶ ಸಂಪತ್ತನ್ನು ಬಳಸಿಕೊಳ್ಳುವ ಮಹತ್ ಕಾರ್ಯದಲ್ಲಿ ಅಭೂತಪೂರ್ವ ಸಾಧನೆ ನಡೆಸಿರುವ ಭಾರತೀಯ ಬಾಹ್ಯಾಕಾಶ ವಿಜ್ಞಾನಿಗಳನ್ನು ಈ ಸದನ ತುಂಬು ಹೃದಯದಿಂದ ಅಭಿನಂದಿಸುತ್ತದೆ. ವಿವಿಧೋದ್ದೇಶ ಹಾಗೂ ಬಹುಪಯೋಗಿ ಉಪಗ್ರಹ ಸರಣಿಯಲ್ಲಿ ಎರಡನೆಯ ತಲೆಮಾರಿನ ಉಪಗ್ರಹವಾದ ಇನ್‌ಸಾಟ್–2ಎ ಉಪಗ್ರಹವನ್ನು ರಚಿಸಿ ಉಡಾಯಿಸುವಲ್ಲಿ ಯಶಸ್ವಿಯಾಗಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳು, ತಂತ್ರಜ್ಞರು ಮತ್ತು ಸಿಬ್ಬಂದಿಗೆ ಈ ದೇಶದ ಜನತೆ ಕೃತಜ್ಞರು. ಅಭಿವೃದ್ಧಿಶೀಲ ರಾಷ್ಟ್ರಗಳ ವೈಜ್ಞಾನಿಕ ಸ್ವಪರಿಪೂರ್ಣತೆಯಲ್ಲಿ ಇದೊಂದು ಬೃಹತ್ ಹೆಜ್ಜೆ. ನಮ್ಮಲ್ಲಿರುವ ಸಾಧನ ಸಲಕರಣೆಗಳನ್ನು ಬಳಸಿ ನಮ್ಮ ವಿಜ್ಞಾನಿಗಳು ರಚಿಸಿದ ಉಪಗ್ರಹ. ಉಳಿದೆಲ್ಲಾ ಉಪಮಾನಗಳಿಗೆ ಮೀರಿ ಬೆಂಗಳೂರು ವಿಜ್ಞಾನ ನಗರವಾಗಿ ಬೆಳೆದಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರದ ತವರು ಬೆಂಗಳೂರು. ಹೀಗಾಗಿ ಭಾರತೀಯ ಬಾಹ್ಯಾಕಾಶ ಸಾಧನೆಯ ಬಗೆಗೆ ನಮಗೆ ವಿಶೇಷವಾದ ಹೆಮ್ಮೆ. ಇನ್‌ಸಾಟ್–2ಎ ಉಪಗ್ರಹದ ಕಾರ್ಯ ಯಶಸ್ವಿಯಾಗಿ ಭಾರತೀಯ ಬಾಹ್ಯಾಕಾಶ, ಭಾರತೀಯ ಬಾಹ್ಯಾಕಾಶ ವಿಜ್ಞಾನಿಗಳು ಶಾಂತಿ ಕಾರ್ಯಗಳಿಗೆ ವಿಜ್ಞಾನವನ್ನು ಅಳವಡಿಸುವಲ್ಲಿ ಇನ್ನೂ ಹೆಚ್ಚು ಯಶಸ್ಸು ಸಾಧಿಸಲಿ ಎಂದು ಈ ಸದನ ಹಾರೈಸುತ್ತದೆ.

(ಸದಸ್ಯರೆಲ್ಲರೂ ಸಂತಸ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದರು)

ಈ ಸದನದ ನಿರ್ಣಯವನ್ನು ಇಸ್ರೋ ಅಧ್ಯಕ್ಷರಿಗೆ ಕಳುಹಿಸಿಕೊಡಲಾಗುವುದು.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ : ಪ್ರೌಢಶಾಲಾ ಮುಖ್ಯೋಪಾಧ್ಯಾಯರುಗಳ ನೇಮಕಾತಿಯನ್ನು ರದ್ದುಪಡಿಸಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆ ಮೂಲಕ ಅತ್ಯಂತ ಪ್ರಮುಖವಾದಂಥ ಸಂಗತಿಯನ್ನು ತಮಗೆ ಕಳುಹಿಸಿದ್ದೇನೆ. ಅದೇನೆಂದರೆ, ಕೆ.ಪಿ.ಎಸ್.ಸಿ. ಯಿಂದ ಖಾಲಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಸಂದರ್ಶನ ನಡೆಸಿದ್ದಾರೆ, ಈ ಬಗ್ಗೆ ಪತ್ರಿಕಾ ಹೇಳಿಕೆ ಕೊಟ್ಟು ಈ ಸರ್ಕಾರ ಏಕಾಏಕಿಯಾಗಿ ಅದನ್ನು ರದ್ದುಮಾಡಿ ಅವರ ಒಂದು ಹಕ್ಕನ್ನು ಇವರೇ ಪಡೆದುಕೊಳ್ಳತಕ್ಕಂಥ ಒಂದು ಪ್ರಯತ್ನ ಇವತ್ತು ಈ ಸರ್ಕಾರ ಮಾಡಿದೆ. ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ 10–7–1992ರಂದು ಈ ಮಂತ್ರಿಮಂಡಲದ ಸಚಿವ ಸಂಪುಟದ ಸಭೆ ಈ ಒಂದು ನಿರ್ಧಾರ ತೆಗೆದುಕೊಂಡಿರುವುದನ್ನು ಸಂಬಂಧಪಟ್ಟ ವಾರ್ತಾ